**ಸಾಕ್ಷಿ ಯನ್ನು ದಿನಾಂಕ: 09-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ :- ವಾದಿ ಪರ ವಕೀಲರಿಂದಃ**

ದಿನಾಂಕಃ 15-03-2006 ರ ಕರಾರು ಪತ್ರವನ್ನು ನಿಪಿ-1 ಎಂದು, ಕಟ್ಟಡದ ಕರಾರು ಪತ್ರವನ್ನು ನಿಪಿ-2 ಎಂದು, Facilitate ಕರಾರು ಪತ್ರವನ್ನು ನಿಪಿ-3 ಎಂದು, ಜೆ.ಡಿ.ಎ. ಕರಾರು ಪತ್ರದ ನಕಲನ್ನು ನಿಪಿ-4 ಎಂದು, ಸಾಮಾನ್ಯ ಅಧಿಕಾರ ಪತ್ರದ ನಕಲನ್ನು ನಿಪಿ-5 ಎಂದು, ಹಕ್ಕು ಬಿಡುಗಡೆ ಪತ್ರದ ನಕಲನ್ನು ನಿಪಿ-6 ಎಂದು, Assignment Deed ನ ನಕಲನ್ನು ನಿಪಿ-7 ಎಂದು, ದಾನ ಪತ್ರದ ನಕಲನ್ನು ನಿಪಿ-8 ಎಂದು, ಲೇಔಟ್ ಪ್ಲ್ಯಾನ್ ನಕಲನ್ನು ನಿಪಿ-9 ಎಂದು, ದಿನಾಂಕಃ 10-09-2010 ಮತ್ತು 08-10-2010 ರ ಪತ್ರದ ನಕಲುಗಳನ್ನು ನಿಪಿ-10 ಮತ್ತು 11 ಎಂದು, Arbitration Case No.43/2016 ರ ತಕರಾರು, Memo of Adoption ನ ನಕಲನ್ನು ನಿಪಿ-12 ಮತ್ತು 13 ಎಂದು, Arbitration Award ಪ್ರತಿಯನ್ನು ನಿಪಿ-14 ಎಂದು, Arbitration ನಂ.15012/2018 ನ ತೀರ್ಪಿನ ಪ್ರತಿಯನ್ನು ನಿಪಿ-15 ಎಂದು, ಎಂ.ಎಫ್.ಎ. ನಂ.1154/2020 ರ ಆದೇಶದ ನಕಲನ್ನು ನಿಪಿ-16 ಎಂದು, ಅಸಲು ದಾವಾ ನಂ.653/2013 ರಲ್ಲಿ ಸಲ್ಲಿಸಿದ ಪ್ರಮಾಣ ಪತ್ರದ ನಕಲನ್ನು ನಿಪಿ-17 ಎಂದು, ದಿನಾಂಕಃ 01-09-2006 ಮತ್ತು 20-12-2023 ರ ಕ್ರಯಪತ್ರದ ನಕಲುಗಳನ್ನು ನಿಪಿ-18 ಮತ್ತು 19 ಎಂದು, 2 - ಬ್ಯಾಂಕ್ ಸ್ಟೇಟ್ಮೆಂಟ್ ನ ನಕಲುಗಳನ್ನು ನಿಪಿ-20 ಮತ್ತು 21 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :-** ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**